ಅಧ್ಯಕ್ಷರು : ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತನ್ನಿ.

ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು) : ಈ ವಿಷಯವನ್ನು ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ತರುತ್ತೇನೆ.

8. ವಿಷಯ : ಸ್ಯಾಂಕಿ ಕೆರೆ ಒತ್ತುವರಿಯಾಗಿರುವುದನ್ನು ಕೂಡಲೇ ತೆರವುಗೊಳಿಸುವ ಬಗ್ಗೆ

ಡಾ : ಸಿ.ಎನ್. ಅಶ್ವತ್ಥನಾರಾಯಣ (ಮಲ್ಲೇಶ್ವರಂ) : ಸ್ಯಾಂಕಿ ಕೆರೆ ಒತ್ತುವರಿಯಾಗಿರುವದನ್ನು ಕೂಡಲೇ ತೆರವುಗೊಳಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

ಅಧ್ಯಕ್ಷರು : ಈ ಪ್ರಶ್ನೆಗೆ ಉತ್ತರ ಬಂದಿಲ್ಲ, ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರೋಣ.

ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು) : ಈ ಪ್ರಶ್ನೆಗೆ ಉತ್ತರ ಬಂದಿಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಡಾ: ಸಿ.ಎನ್. ಅಶ್ವತ್ಥನಾರಾಯಣ (ಮಲ್ಲೇಶ್ವರಂ) : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಗಮನ ಸೆಳೆಯಲಿಕ್ಕೆ 15 ದಿವಸಗಳ ಹಿಂದೆಯೇ ಕೊಟ್ಟಿದ್ದೇನೆ. ಉತ್ತರವನ್ನು ಕೊಟ್ಟಿಲ್ಲ.

ಅಧ್ಯಕ್ಷರು : ಅವರು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಾರೆ.

ಶ್ರೀ ಸಿ.ಎಂ. ಉದಾಸಿ : ಉತ್ತರ ಬಂದಿಲ್ಲವೆಂದು ಹೇಳುತ್ತಿದ್ದೇನೆ.

ಡಾ: ಸಿ.ಎನ್. ಅಶ್ವತ್ಥನಾರಾಯಣ : ಸ್ಯಾಂಕಿ ಕೆರೆ 6 ಎಕರೆ ಒತ್ತುವರಿಯಾಗಿದೆ. ಈ ಬಗ್ಗೆ ಕ್ರಮ ಜರುಗಿಸಲಿಕ್ಕೆ ಅವರ ಗಮನಕ್ಕೆ ತರಬೇಕು.

ಅಧ್ಯಕ್ಷರು : ಈಗ ಉತ್ತರವಿಲ್ಲದೆ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರೋಣ.

ಡಾ: ಸಿ.ಎನ್. ಅಶ್ವತ್ಥನಾರಾಯಣ : ಅಲ್ಲಿ ಸರ್ವೆ ವರದಿ ಪ್ರಕಾರ ಅಲ್ಲಿ 6 ಎಕರೆ ಒತ್ತುವರಿಯಾಗಿದೆ. ಅದರ ಬಗ್ಗೆ ಕೂಡಲೇ ಕ್ರಮ ಜರುಗಿಸಲು ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಆ ಬಗ್ಗೆ ಕ್ರಮ ಕೈಗೊಳ್ಳಲಿಕ್ಕೆ ಹೇಳಿ.

9. ವಿಷಯ : ಬೆಳಗಾವಿಯ ನೇಕಾರಿಗೆ ಶೇಕಡಾ 4 ಹಾಗೂ 3ರ ಬಡ್ಡಿ ದರದಲ್ಲಿ ಸಾಲ ವಿತರಿಸುವ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸರಳೀಕರಣ ಹಾಗೂ ಬ್ಯಾಂಕುಗಳಿಗೆ ಬಡ್ಡಿ ಸಹಾಯ ಧನ ಮಂಜೂರಾತಿ ಮಾಡುವ ಬಗ್ಗೆ :

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ) : ಬೆಳಗಾವಿಯ ನಗರದಲ್ಲಿ ನೇಕಾರರು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಶೇಕಡಾ 3ರ ಬಡ್ಡಿ ದರದಲ್ಲಿ ಸಾಲ ವಿತರಿಸುವ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸಹಾಯ ಧನ ಮಂಜೂರು ಮಾಡಿದ್ದಾರೆ. ಆದರೆ ಅದರ ಪೆಂಡಿಂಗ್ ಬಿಲ್ಸ್ ಬಂದಿಲ್ಲ. Belgaum Industrial Co-opeative Bank ಸುಮಾರು 87.00 ಲಕ್ಷ ರೂಪಾಯಿಗಳು, ಕರ್ನಾಟಕ ಇಂಡಸ್ಟ್ರಿಯಲ್ ಕೋ–ಆಪರರೇಟಿವ್ ಬ್ಯಾಂಕ್ 15.00 ಲಕ್ಷ ರೂಪಾಯಿಗಳು, ಗಾಯಿತ್ರಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ. 5.00 ಲಕ್ಷ ರೂಪಾಯಿಗಳು ಹೀಗೆ ಒಂದು ಕೋಟಿ ಏಳು ಲಕ್ಷ ರೂಪಾಯಿಗಳು ಬಾಕಿ ಸಹಾಯ ಧನ ಬರಬೇಕಾಗಿದೆ. ದಯಮಾಡಿ ಈ ಬ್ಯಾಂಕುಗಳು ಮುಚ್ಚುವ ಸ್ಥಿತಿಯಲ್ಲಿರುವುದರಿಂದ ಕೂಡಲೇ ಈಸಹಾಯಧನ ಬಿಡುಗಡೆಯಾಗಬೇಕು.

ಅಧ್ಯಕ್ಷರು : ಇದಕ್ಕೆ ಉತ್ತರ ಬಂದಿಲ್ಲ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ : ಉತ್ತರ ಕರ್ನಾಟಕದಲ್ಲಿ ನೇಕಾರರ ಸಂಖ್ಯೆ ಜಾಸ್ತಿ ಇರುವುದು. At least ನಾವು ನೇಕಾರರ ಸಮಸ್ಯೆಗಳನ್ನು ಸಣ್ಣ ಪ್ರಮಾಣದಲ್ಲಿ ಬಗೆಹರಿಸಲಿಕ್ಕೆ ಅಗುವುದಿಲ್ಲವೆಂದರೆ ಹೇಗೆ ಅಧ್ಯಕ್ಷರೆ?

ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು) : ಈಗ ಗೂಳಿಹಟ್ಟಿ ಶೇಖರ್‌ರವರು ನೇಕಾರರಿಗೆ ಬಡ್ಡಿ ದರದಲ್ಲಿ ಕೊಟ್ಟಿರುವ ಸಾಲ ವಿತರಣೆ, ಮಂಜೂರಾತಿಯ ಬಗ್ಗೆ ಕೇಳಿದ್ದೀರಿ, ಉತ್ತರವಿನ್ನೂ